VIJAYAKARNATAKA

# ಕೃಷಿ ಮೇಳದಲ್ಲಿ ಕೃಷಿ ಉತ್ಪನ್ನ ದರ್ಶನ

■ **ರಮೇಶ್ ಕೆ. ಪುಣಚ ವಿಟ್ಲ**



ವಿಟ್ಲ ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯಲ್ಲಿ ಶನಿವಾರ ನಡೆದ ಕೃಷಿ ಮೇಳದಲ್ಲಿ ಕೃಷಿ ಉತ್ಪನ್ನ ಹಾಗೂ ಕೃಷಿ ವಸ್ತು ಪ್ರದರ್ಶನ ಮಾರಾಟ ಕೃಷಿಕರ ಗಮನ ಸೆಳೆದವು.

ಶಿವಮೊಗ್ಗದ ಹೇರ್ಳೆ ಟೆಕ್ನಿಕಲ್ ಮತ್ತು ರಿಸರ್ಚ್ ವರ್ಕ್ಸ್ ವತಿಯಿಂದ ಮರ ಏರುವ ಯಂತ್ರ, ಕಾಸರಗೋಡು ಕೃಷಿ ವಿಜ್ಞಾನ ಕೇಂದ್ರ(ಕೆವಿಕೆ) ವತಿಯಿಂದ ಚಕ್ಕುಲಿ, ಉಂಡೆ, ಚಟ್ನಿ ಹುಡಿ ಮೊದಲಾದ ತಿಂಡಿಗಳ ಮಾರಾಟ ಹಾಗೂ ಪ್ರದರ್ಶನ ನಡೆಯಿತು.

ಕಾಸರಗೋಡು ಕೃಷಿ ವಿಜ್ಞಾನ ಕೇಂದ್ರ (ಸಿಪಿಸಿಆರ್ಐ)ದ ಹಲಸಿನ ನಾನಾ ಖಾದ್ಯ ಪ್ರದರ್ಶನ, ಕೃಷಿ ವಿಜ್ಞಾನ ಕೇಂದ್ರ ಮಂಗಳೂರು ವತಿಯಿಂದ ಹಲಸಿನ ರಸ ಹಾಗೂ ಮೌಲ್ಯವರ್ಧಿತ ಉತ್ಪನ್ನಗಳು ರೈತರ ಗಮನ ಸೆಳೆದವು.

ಶಿವಮೊಗ್ಗ ಕೃಷಿ ತೋಟಗಾರಿಕಾ ವಿಶ್ವವಿದ್ಯಾಲಯದವರ ತೆಂಗು, ಪಪ್ಪಾಯಿ, ಪೆಪ್ಪರ್, ಮೀಟರ್ ಅಲಸಂಡೆ (ಗುಳ್ಳ), ಗೇರು ಗಿಡ, ಉಡುಪಿ ಮಲ್ಲಿಗೆ, ಚೋಟವಾಡಿ, ಮೋಹಿತ್ ನಗರ್ ಅಡಕೆ, ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರದವರಿಂದ ನಾನಾ ತಳಿಯ ಗಿಡಗಳು, ಕರ್ನಾಟಕ ಸರಕಾರದ ದಕ್ಷಿಣ ಕನ್ನಡ ಜಿಲ್ಲಾ ತೋಟಗಾರಿಕಾ ಇಲಾಖೆ ವತಿಯಿಂದ 20 ಬೀಜಗಳ ಪ್ರದರ್ಶನ ಹಾಗೂ ಮಾರಾಟ ನಡೆಯಿತು. ಅದರಲ್ಲಿ ಹರಿವೆ, ಮೇಣರಹಿತ ಬೀಜಗಳ ಮಾರಾಟ ಆಕರ್ಷಣೆಯಾಗಿತ್ತು.

ವಿಟ್ಲ ಶಾಖೆಯ ಕೆನರಾ ಬ್ಯಾಂಕ್ ಸಿಬ್ಬಂದಿ ಸ್ಟಾಲ್ ಇಟ್ಟು ಕೃಷಿ ಸಾಲ, ಉದ್ಯೋಗ ಸಾಲ, ವಾಹನ ಸಾಲಗಳ ಬಗ್ಗೆ ಮಾಹಿತಿ ನೀಡಿದರು. ಮಡಿಕೇರಿ ಸಾಂಬಾರ ಬೆಳೆಗಳ ಸಂಶೋಧನಾ ಸಂಸ್ಥೆಯಿಂದ ಕಾಳುಮೆಣಸು, ಲವಂಗ, ಏಲಕ್ಕಿ ಪ್ರದರ್ಶನಗೊಂಡವು.

ಬಾಗಲಕೋಟೆ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ವತಿಯಿಂದ ಚಾಲಿ ಅಡಕೆ, ಕೆಂಪು ಅಡಕೆ, ಹಾಲುಕೆಸು (ಶಿರಸಿ) ಪ್ರದರ್ಶನ ಗೊಂಡವು. ಬಿಳ್ಳಂಪದವು ನಾರಾಯಣ ಭಟ್ ಅವರಿಂದ (ಬೀಜಸಿರಿ ಸಾವಯವ ಕೃಷಿ) ಸುಮಾರು 44 ಬಗೆಯ ಬೀಜಗಳ ಮಾರಾಟ ಹಾಗೂ ಪ್ರದರ್ಶನ ಗೊಂಡವು.

ಬೆಳ್ತಂಗಡಿ ದುರ್ಗಾ ಇಂಡಸ್ಟ್ರಿಯವರ ತಂಪು ಪಾನೀಯಗಳ ಮಾರಾಟ ಮಳಿಗೆ ಗಮನ ಸೆಳೆಯಿತು. ವಾರಣಾಸಿ ಸಂಶೋಧನಾ ಪ್ರತಿಷ್ಠಾನ ವತಿಯಿಂದ ಕಸಿ ಸಸಿಗಳು ಹಾಗೂ ಬೀಜಗಳ ಪ್ರದರ್ಶನ ನಡೆಯಿತು. ಉಪ್ಪಿನಂಗಡಿ ಶ್ರೀ ದುರ್ಗಾ ಮಹಿಳಾ ಗೃಹ ಉದ್ಯಮದವರಿಂದ ರುಚಿ ಶುಂಠಿ, ರುಚಿ ಲಿಂಬೆ, ರಾಜನ್ ಬಿದಿರಕ್ಕಿ ಪ್ರದರ್ಶನ ಮತ್ತು ಮಾರಾಟ ಮಳಿಗೆ ನಡೆಯಿತು.

ಸೆಲ್ಕೋ ಸೌರ ದೀಪದವರಿಂದ ಸೌರ ದೀಪದ ಬಳಕೆಯ ಬಗ್ಗೆ ಮಾಹಿತಿ ನೀಡಲಾಯಿತು. ಪುತ್ತೂರು ಗೇರು ಸಂಶೋಧನಾ ನಿರ್ದೇಶನಾಲಯದ ವತಿಯಿಂದ ನಾನಾ ಬೀಜಗಳು ಹಾಗೂ ಪಬ್ಲಿಕೇಶನ್ಸ್ ಹಾಗೂ ಕಸಿ ಗಿಡಗಳ ಪ್ರದರ್ಶನ ಹಾಗೂ ಮಾರಾಟ, ಗೇರು ಉತ್ಪನ್ನಗಳ ಬಗ್ಗೆ ಮಾಹಿತಿ ನೀಡಲಾಯಿತು. ಎಸ್ಆರ್‌ಕೆ ಕೃಷಿಕ ಉಪಕರಣಗಳಾದ ಏಣಿ, ಕೈಗಾಡಿ ಮೊದಲಾದವು ಪ್ರದರ್ಶನಗೊಂಡವು. ಇದೇ ರೀತಿಯಾಗಿ ಹಲವು ಕೃಷಿ ಸಂಬಂಧಿ ವಸ್ತುಗಳ ಪ್ರದರ್ಶನ ನಡೆಯಿತು.